# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, 4 ಮತ್ತು 5ನೇ ಮಹಡಿ, 'ಈಸ್ಟ್ ವಿಂಗ್', ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 001

ದೂರವಾಣಿ : 080-22265383 ಫ್ಯಾಕ್ಸ್ : 080-22267901

ವೆಬ್‌ಸೈಟ್ : www.kiadb.in ಇ-ಮೇಲ್ : ceoemkiadb@gmail.com


**RPAD**

**ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ಇವರ ನಡವಳಿಗಳು**

ವಿಷಯ: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿನ ಸಹಾಯಕ ಹುದ್ದೆಯ ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಹುದ್ದೆಯನ್ನು ನೇರ ನೇಮಕಾತಿಯಿಂದ ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂ:ಡಿಪಿಎಆರ್:13:ಎಸ್‌ಬಿಸಿ:2001 ದಿನಾಂಕ:21-11-2001

* * * *

**ಪ್ರಸ್ತಾವನೆ :**

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಖಾಲಿಯಿದ್ದ ಸಹಾಯಕ ಹುದ್ದೆಯ ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಹುದ್ದೆಯನ್ನು ಉಲ್ಲೇಖದ ಸರ್ಕಾರದ ಆದೇಶದಂತೆ ಕರ್ನಾಟಕ ನಾಗರಿಕ ಸೇವೆಗಳು (ಭರ್ತಿಯಾಗದೇ ಬಾಕಿ ಉಳಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹುದ್ದೆಗಳಿಗಾಗಿ) (ವಿಶೇಷ ನೇಮಕಾತಿ) ನಿಯಮ 2001 ರಡಿಯಲ್ಲಿ ನಿಯಮ 6(1) ರಂತೆ 29 ವರ್ಷ ಮೇಲ್ಪಟ್ಟು 40 ವರ್ಷದೊಳಗಿನ ಪಟ್ಟಿಯಲ್ಲಿ ಸಹಾಯಕ ಹುದ್ದೆಗೆ ನಿಗದಿಪಡಿಸಿರುವ ಅನುಭವ ಹಾಗೂ ವಿದ್ಯಾರ್ಹತೆಗೆ ಅನುಸಾರವಾಗಿ ಸದರಿ ವಿದ್ಯಾರ್ಹತೆಗೆ ಸಂಬಂಧಿಸಿದ ಶೇಕಡಾವಾರನ್ನು ಪರಿಗಣಿಸಿ ಅತಿ ಹೆಚ್ಚು ಅಂಕಪಡೆದ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗಿರುತ್ತದೆ.

ಪ್ರಸ್ತುತ ಆಯ್ಕೆಯಾಗಿರುವ ಅಭ್ಯರ್ಥಿಯು ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸಹಾಯಕ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಹಾಗೂ ಶೇಕಡವಾರು ಶೇ.75.53% ಅಂಕವನ್ನು ಪಡೆದಿದ್ದು, ಈ ಹುದ್ದೆಗೆ ಅರ್ಜಿ ಸಲ್ಲಿಸಿದ ಉಳಿದ ಅಭ್ಯರ್ಥಿಗಳಿಗಿಂತ ಹೆಚ್ಚಿನ ಅಂಕ ಪಡೆದಿರುವ ಹಿನ್ನಲೆಯಲ್ಲಿ ಹಾಗೂ ಅವರ ಅರ್ಜಿಯೊಂದಿಗೆ ನೀಡಿರುವ ನಮೂನೆ-1ರ ಜಾತಿ ಪ್ರಮಾಣ ಪತ್ರದಂತೆ ಸದರಿಯವರು ಪರಿಶಿಷ್ಟ ಪಂಗಡಕ್ಕೆ ಸೇರಿದವರೆಂದು ದೃಢಪಟ್ಟಿರುವ ಹಿನ್ನಲೆಯಲ್ಲಿ, ಸದರಿ ಅಭ್ಯರ್ಥಿಯನ್ನು ಮಂಡಳಿಯ ಸಹಾಯಕ ಪರಿಶಿಷ್ಟ ಪಂಗಡದ ಬ್ಯಾಕ್‌ಹುದ್ದೆಗೆ ಆಯ್ಕೆ ಮಾಡಲಾಗಿದ್ದು, ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡುವ ಬಗ್ಗೆ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಆದೇಶ ಸಂ:ಕ.ಕೈ.ಪ್ರ.ಮಂ/ಕೇಂ.ಕ/ಆಡಳಿತ-1285/ 8017 /2016-17 ದಿನಾಂಕ:16-8-2016** 22/8

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಸಹಾಯಕ ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಹುದ್ದೆಗೆ ನೇರ ನೇಮಕಾತಿಗೆ ಆಯ್ಕೆಯಾಗಿರುವ ಈ ಕೆಳಕಂಡ ಅಭ್ಯರ್ಥಿಯನ್ನು ವೇತನ ಶ್ರೇಣಿ:16000-400-17200-450-19000-500-21000-600-24600-700-28800-800-29600/- ರಲ್ಲಿ ಪರಿಶಿಷ್ಟ ಪಂಗಡ ಹುದ್ದೆಗೆ ಈ ಕೆಳಕಂಡ ಷರತ್ತುಗಳ ಮೇರೆಗೆ ನೇಮಕಾತಿ ಮಾಡಿ ಆದೇಶಿಸಿದೆ.

........2

| ಕ್ರ.ಸಂ. | ಆಯ್ಕೆಯಾದ ಅಭ್ಯರ್ಥಿಯ ಹೆಸರು ಮತ್ತು ವಿಳಾಸ | ಅಭ್ಯರ್ಥಿಯ ವಯಸ್ಸು | ಅಭ್ಯರ್ಥಿಯ ಜಾತಿ | ವಿದ್ಯಾರ್ಹತೆ | ಆಯ್ಕೆಯಾದ ಅಭ್ಯರ್ಥಿಯು ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಗಳಲ್ಲಿ ಒಟ್ಟಾರೆ ಗಳಿಸಿರುವ ಶೇಕಡಾವಾರು |
|---|---|---|---|---|---|
| 1 | ಶ್ರೀಮತಿ. ವೀಣಾ ಟಿ.ವಾಲೀಕಾರ್ ತಂದೆ ತಿಪ್ಪಣ್ಣ ವಾಲೀಕಾರ್<br>ಕರ್ನಾಟಕ ಉಚ್ಚ ನ್ಯಾಯಾಲಯ,<br>ಧಾರವಾಡ ಪೀಠ, ಸಿಬ್ಬಂದಿ ವಸತಿ ಗೃಹ ಸಂ:ಬಿ-1-18,<br>ಧಾರವಾಡ-580011 | 32 ವರ್ಷ | ಪ.ಪಂಗಡ | ಬಿ.ಎ. | 75.53% |

**: : ಷರತ್ತುಗಳು : :**

1 ಅಭ್ಯರ್ಥಿಯು ನೇಮಕಾತಿ ಆದೇಶ ತಲುಪಿದ 15 ದಿನಗಳೊಳಗಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕ.ಕೈ.ಪ್ರ.ಮಂಡಳಿ, ಕೇಂದ್ರ ಕಛೇರಿ, ರೇಸ್ ಕೋರ್ಸ್ ರಸ್ತೆ, ಖನಿಜ ಭವನ ಬೆಂಗಳೂರು ಇವರ ಸಮಕ್ಷಮದಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ, ಈ ನೇಮಕಾತಿ ಆದೇಶವನ್ನು ರದ್ದುಪಡಿಸಲಾಗುವುದು. ಅಭ್ಯರ್ಥಿಯು ಕರ್ತವ್ಯಕ್ಕೆ ವರದಿ ಮಾಡಿಕೊಂಡ ನಂತರ ಮರುಸ್ಥಳ ನಿಯುಕ್ತಿ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

2 ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗುವಾಗ ಸಕ್ಷಮ ವೈದ್ಯಾಧಿಕಾರಿಗಳಿಂದ ಪಡೆದ ದೈಹಿಕ ಅರ್ಹತಾ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು.

3 ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ನಿಯಮಾನುಸಾರ ಒಂದು ವರ್ಷದವರೆಗೆ ಖಾಯಂಪೂರ್ವ ಸೇವಾವಧಿ ಯಲ್ಲಿರಿಸಲಾಗುವುದು. ಈ ಅವಧಿಯಲ್ಲಿ ಮಂಡಳಿಯ ಸೇವಾ ನಿಯಮಾವಳಿಗಳನ್ವಯ ನಡವಳಿಕೆಯು ಸಮಂಜಸವಾಗಿರದಿದ್ದಲ್ಲಿ ಅವರನ್ನು ಸೇವೆಯಿಂದ ವಜಾ ಮಾಡಲಾಗುವುದು.

4 ಸದರಿಯವರು ಕರ್ತವ್ಯಕ್ಕೆ ಹಾಜರಾಗುವಾಗ ಶೈಕ್ಷಣಿಕ ವಿದ್ಯಾರ್ಹತೆ, ಜಾತಿ ಮತ್ತು ವಯೋಮಿತಿಯ ಬಗ್ಗೆ ಮೂಲ ಹಾಗೂ ಧೃಢೀಕೃತ ಪ್ರಮಾಣ ಪತ್ರಗಳನ್ನು ಹಾಜರುಪಡಿಸತಕ್ಕದ್ದು.

5 ಮಂಡಳಿಯ ಸಹಾಯಕರ ಹುದ್ದೆಯಲ್ಲಿ ಕನಿಷ್ಠ ಮೂರು ವರ್ಷಗಳ ಕಾಲ ಸೇವೆಯನ್ನು ಸಲ್ಲಿಸುವ ಕುರಿತು ರೂ.100/-ರ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ನೀಡತಕ್ಕದ್ದು.

6 ಕ.ಕೈ.ಪ್ರ.ಮಂಡಳಿಯ ಆದೇಶದಂತೆ ಮಂಡಳಿಯ ಯಾವುದೇ ವಿಭಾಗ/ಕಛೇರಿ/ಸ್ಥಳಗಳಲ್ಲಿ ಸೇವೆ ಸಲ್ಲಿಸಲು ಬದ್ಧರಾಗಿರತಕ್ಕದ್ದು.

7. ಈ ನೇಮಕಾತಿಯು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ ನಿಯಮಗಳು) 1977 ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕಾಯ್ದೆ, 1966 ರಡಿಯಲ್ಲಿ ರಚಿಸಿರುವ ಸೇವಾ ನಿಯಮ ಹಾಗೂ ಇತರೆ ನಿಯಮಗಳಿಗೆ ಒಳಪಟ್ಟಿರುತ್ತದೆ.

ಸಹಿ/-
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಹಾಗೂ ಕಾರ್ಯನಿರ್ವಾಹಕ ಸದಸ್ಯರು

**ಗೆ,**
ಶ್ರೀಮತಿ. ವೀಣಾ ಟಿ.ವಾಲೀಕಾರ್ ತಂದೆ ತಿಪ್ಪಣ್ಣ ವಾಲೀಕಾರ್
ಕರ್ನಾಟಕ ಉಚ್ಚ ನ್ಯಾಯಾಲಯ,
ಧಾರವಾಡ ಪೀಠ, ಸಿಬ್ಬಂದಿ ವಸತಿ ಗೃಹ ಸಂ:ಬಿ-1-18,
ಧಾರವಾಡ-580011

**ಪ್ರತಿಗಳು:** ಹಣಕಾಸು ನಿಯಂತ್ರಣಾಧಿಕಾರಿ/ಲೆಕ್ಕಾಧಿಕಾರಿ, ಕ.ಕೈ.ಪ್ರ.ಮಂ, ಕೇಂದ್ರ ಕಛೇರಿ, ಬೆಂಗಳೂರು ಇವರ ಮಾಹಿತಿಗಾಗಿ.

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಹಾಗೂ ಕಾರ್ಯನಿರ್ವಾಹಕ ಸದಸ್ಯರು